*2-00 P. M.

PAPERS LAID ON THE TABLE

SRI N. HUTCHAMASTHY GOWDA (Minister for Revenue).—I beg to lay.—

Notification No, REV. SR 2/77-78 dated 6th April, 1977.

Suspension of land Revenue in the Villages of Haveri Taluk for the year 1976-77.

Under Section 194 (2) of the Karnataka Land Revenue Act, 1964.

SRI D. K. NAIKAR (Minister for Municipal Administration and Political Pensions).—I beg to lay.

Notification No. SO 839 dated 7th April, 1977.

Corrigendum to Notification No. HMA 49 TCT 76 dated 23rd March, 1977.

Under sub-section (5) of Section 316 of the Karnataka Municipalities Act, 1964.

SRI B. SUBBAYYA SHETTY (Minister of State for Information and Power).—I beg to lay :

The Annual Financial Statement of Karnataka Electricity Board for the year 1977-78.

Under Section 61 (3) of the Electricity (Supply) Act, 1948.

MADAM SPEAKER.—All the Paper are laid.

Calling Attention to matters of urgent Public Importance (Contd)

(iv) re :—Reported Statement of Chief justice of Karnataka High Court about some Ministers influencing in a Criminal case.

† ಶ್ರೀ ಹೆಚ್. ಡಿ. ದೇವೆಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಣಿಯವರೇ, ನಿನ್ನೆ ದಿವಸ ಈ ಸಭೆಯಲ್ಲಿ ಒಂದು ಮುಖ್ಯವಾದ ವಿಷಯವನ್ನು ಕುರಿತು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿ ಹಾಜರಿರಲಿಲ್ಲ ನಮ್ಮ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಈ ರಾಜ್ಯದ ಇಬ್ಬರು ಮಂತ್ರಿಗಳು ನ್ಯಾಯಾಧೀಶರಲ್ಲಿ ಹಸ್ತಕ್ಷೇಪ ಮಾಡಿ ತೀರ್ಪನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆಂಬ ಮಾತನ್ನು ಹೇಳಿದ್ದಾರೆ. ಆದರ ಬಗ್ಗೆ ಈಗಾಗಲೇ ಮತ್ತೊಂದು ಹೇಳಿಕೆಯನ್ನು ಕೂಡ ಕೊಟ್ಟಿದ್ದಾರೆ. ನಾನು ಈಗ ರಾಜ್ಯ ಸರ್ಕಾರದ ಮುಖಾಂತರ ಅವರಿಗೆ ಒಂದು ಪತ್ರವನ್ನು ಬರೆದು ಆ ಇಬ್ಬರು ಮಂತ್ರಿಗಳು ಯಾರು ಎಂಬುವುದನ್ನು ತಿಳಿಸಬೇಕೆಂದು ಕೇಳಿದ್ದೇನೆ. ತಾವು ಕೂಡ ಕೇಳಿದ್ದೀರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಅದಕ್ಕೆ ಅವರು ಉತ್ತರಗಳನ್ನು ಕಳುಹಿಸುವುದಕ್ಕೆ ಸಾಧ್ಯವಿಲ್ಲದಿದ್ದರೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಿಗೆ ಕಳುಹಿಸಿಕೊಡ ಬಹುದು. ಅದಕ್ಕೆ ಕಾನೂನಿನ ಚೌಕಟ್ಟಿನಲ್ಲಿ ಅವಕಾಶ ಇದೆ ಆದರೆ ಇವತ್ತು ನಮ್ಮ ಮುಂದೆ ಇರತಕ್ಕ

ಪ್ರಶ್ನೆ ಏನೆಂದರೆ, ಈ ರಾಜ್ಯದ ಇಬ್ಬರು ಮಂತ್ರಿಗಳು ಮಾಡಿರುವ ಹಸ್ತಕ್ಷೇಪದಲ್ಲಿ ಸತ್ಯಾಂಶ ಇರುವುದರಿಂದ ದಯವಿಟ್ಟು ಪೂರ್ಣ ಮಂತ್ರಿಗಳು ಮುಖ್ಯಮಂತ್ರಿಗಳು ಆ ಬಗ್ಗೆ ಹೇಳಿಕೆ ಕೊಡಬೇಕೆಂದು ಕೇಳಬಯಸುತ್ತೇನೆ.

SRI D. DEVARAJ URS (Chief Minister).—In reply to the Calling Attention Notices by Shri H. D. Deve Gowda, Shri T. R. Shamanna and others, I beg to make the following statement, viz :—

The Chief Justice of the Karnataka High Court, Shri G K. Govinda Bhat is reported to have made a statement at a function held at the High Court to mourn the death of Shri Justice D. Noronha, that some Ministers of the State Goverement had approached Shri Naronha to influence him in a criminal case in which the Ministers were allegedly involved.

I was in Delhi on the 12th of April, when the Chief Justice's statement was reported in the press, and I promptly sent a message requesting the Chief Secretary to call on the Chief Justice and ascertain the details as to who were the Ministes who tried to influence the judges. I understand that the Chief Justice declined to divulge any names.

On my arrival at Bangalore on the 16th April 1977, I wrote to the Chief Justice, and he sent me his reply on the 18th. He has declined to divulge the names, and has stated that the conduct of judges cannot be discussed in the State Legislature, and that the proper place for discussion is the Parliament.

† ಶ್ರೀ ಎಚ್. ಡಿ. ದೇವೇಗೌಡ.—ನಾನು ಜಡ್ಜ್‌ಗಳ ಕಾಂಡಕ್ಟ್ ಬಗ್ಗೆಯಾಗಲಿ, ಅಥವಾ ಅವರು ತೆಗೆದುಕೊಂಡಿರತಕ್ಕ ನಿಲುವಿನ ಬಗ್ಗೆಯಾಗಲಿ ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ ; ನಮ್ಮ ರಾಜ್ಯದ ಇಬ್ಬರು ಮಂತ್ರಿಗಳ ಕಾಂಡಕ್ಟ್ ಬಗ್ಗೆ ಇವತ್ತು ಈ ಸಭೆ ತೀವ್ರವಾಗಿ ಪರಿಶೀಲನೆ ಮಾಡಬೇಕಾಗಿದೆ. ಇಲ್ಲಿರತಕ್ಕ ಸಚಿವ ಸಂಪುಟದಲ್ಲಿ ೩೦ ಜನ ಮಂತ್ರಿಗಳಿದ್ದಾರೆ. ಆ ಪೈಕಿ ಯಾರು ಈ ಕೃತ್ಯವನ್ನು ಮಾಡಿದರು ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ರಾಜ್ಯದ ಜನತೆಯ ಪ್ರಮುಖವಾದ ಪ್ರತಿನಿಧಿಗಳಾಗಿ ಈ ಮನೆಯಲ್ಲಿ ಕೆಲಸ ಮಾಡತಕ್ಕ ಕಾಲದಲ್ಲಿ ಯಾರು ಈ ಕೃತ್ಯವನ್ನು ಎಸಗಿದರು ಎಂಬುದನ್ನು ತಿಳಿದುಕೊಂಡು, ಒಂದು ನ್ಯಾಯಾಲಯದ ಶ್ರೇಷ್ಠತೆಯನ್ನು ಕಾಪಾಡಿದಂತೆ ಈ ಮನೆಯ ಶ್ರೇಷ್ಠತೆಯನ್ನು ಕಾಪಾಡತಕ್ಕದ್ದು ನಮಗೆ ಜಿಷ್ಟೇ ತೀವ್ರತೆಯಾಗಿದೆ. ಈ ಬಗ್ಗೆ ನೀವು ಸಹ ಶೀಘ್ರವಾಗಿ ಕ್ರಮವನ್ನು ತೆಗೆದುಕೊಂಡಿದ್ದೀರಿ; ನೀವು ವಿಳಂಬ ಮಾಡಿದ್ದೀರಿ ಎಂಬ ಮಾತನ್ನು ಹೇಳುತ್ತಿಲ್ಲ. ಆದರೆ ಇವತ್ತು ಯಾರು ಆರೋಪಣೆ ಮಾಡಿದ್ದಾರೋ ಅವರು ಹೆಸರುಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ನ್ಯಾಯಾಲಯದ ಪಾವಿತ್ರತೆಯ ಬಗ್ಗೆ ಸಂಶಯ ಬರುತ್ತದೆ, ಅಲ್ಲದೆ ಈ ಮನೆಯಲ್ಲಿ ಕೆಲಸ ಮಾಡತಕ್ಕ ಎಲ್ಲ ಸಚಿವರನ್ನು ಸಹ ಕರೆಸಿ ವಿಚಾರಣೆ ಮಾಡಬೇಕಾದ ಪ್ರಸಂಗ ಬರುತ್ತದೆ. ಆದಕಾರಣ ಇವತ್ತು ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ ಹಸ್ತಕ್ಷೇಪ ಮಾಡಿದ ಇಬ್ಬರು ಸಚಿವರುಗಳು ಯಾರು ಎಂಬುದನ್ನು ತಿಳಿಸಬೇಕಾಗುತ್ತದೆ, ಇಲ್ಲದೆ ಹೋದರೆ ಅವರು ಏನು ಸ್ಟೇಟ್‌ಮೆಂಟ್ ಮಾಡಿದ್ದಾರೆ ಅದನ್ನು ವಾಪಸ್ಸು ಪಡೆಯಬೇಕಾಗುತ್ತದೆ. ಈ ಬಗ್ಗೆ ಲಘುವಾಗಿ ಮಾತನಾಡಿದರೆ ಸಾಧ್ಯವಾಗುವುದಿಲ್ಲ. ಅವರಿಗೆ ಹೇಗೆ ನ್ಯಾಯಾಲಯದ ಮತ್ತು ನ್ಯಾಯಾಧೀಶರ ಪಾವಿತ್ರತೆಯನ್ನು ಕಾಪಾಡಬೇಕೆಂಬ ಬಯಕೆ ಇದೆಯೋ ಅದೇ ರೀತಿ ಸಮಂಗೂ ಸಹ ಈ ಸದನದಲ್ಲಿ ಕೆಲಸ ಮಾಡತಕ್ಕ ಕಾಲದಲ್ಲಿ ಈ ಮನೆಯ ಶ್ರೇಷ್ಠತೆಯನ್ನು ಕಾಪಾಡಬೇಕೆಂಬ ಬಯಕೆ ಇದೆ. ಮೊಕದ್ದಮೆಯಲ್ಲಿ ಶಿಫಾರಸ್ಸು ಮಾಡುವುದಕ್ಕಾಗಲೀ ಅಥವಾ ಹಸ್ತಕ್ಷೇಪ ಮಾಡುವುದಕ್ಕಾಗಲಿ ಬಂದಿದ್ದರು ಎಂದು ಹೇಳಬಹುದು; ಆದರೆಅದನ್ನು ಅಷ್ಟು ಲಘುವಾಗಿ ಹೇಳುವುದಕ್ಕೆ

ಸಾಧ್ಯವಾಗುವುದಿಲ್ಲ. ಆದ್ದರಿಂದ ದಯವಿಟ್ಟು ಹೂನ್ಯವಂಖ್ಯೆಮಂತ್ರಿಗಳು ಆ ಇಬ್ಬರು ಮಂತ್ರಿಗಳು ಯಾರು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇವತ್ತು ಆಧಾರ ಇಲ್ಲದೆ ಇರತಕ್ಕ ಹೇಳಿಕೆಯನ್ನು ಅವರೇನಾದರೂ ಕೊಟ್ಟಿದ್ದರೆ ಬಹುಶಃ ಜನತೆ ಅವರ ಮೇಲೆ ಯಾವ ಭಾವನೆಯನ್ನು ವ್ಯಕ್ತ ಪಡಿಸಬೇಕೆಂಬುದು ಜನತೆಗೆ ಬಿಟ್ಟ ವಿಚಾರ. ಅವರು ಆಧಾರರಹಿತವಾದ ಆರೋಪಣೆಯನ್ನು ಮಾಡಿದ್ದರೆ ಅವತೇ ಆ ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ. ಒಂದು ವೇಳೆ ಆದಕ್ಕೆ ಆಧಾರವಿದ್ದು ಅದನ್ನು ಲೆಜಿಸ್ಲೇಚರಿನಲ್ಲಿ ಪ್ರಶ್ನೆ ಮಾಡತಕ್ಕ ಅಧಿಕಾರವಿಲ್ಲದಿದ್ದು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಮಾಡುವುದಕ್ಕೆ ಅಧಿಕಾರವಿದ್ದರೆ ಅವರು ಅದಕ್ಕೆ ಅವಕಾಶ ಮಾಡಿಕೊಟ್ಟು ತಮ್ಮ ಪಾವಿತ್ರತೆಯನ್ನು ಕಾಪಾಡಿಕೊಳ್ಳುವುದಕ್ಕೆ ಹೋರಾಟ ಮಾಡಬೇಕಾಗುತ್ತದೆ. ಆದಕಾರಣ ತಾವು ಈ ಬಗ್ಗೆ ದಯವಿಟ್ಟು ಅವರನ್ನು ಕೇಳಬೇಕೆಂದು ಒತ್ತಾಯ ಮಾಡುತ್ತೇನೆ, ಮತ್ತು ಈ ಬಗ್ಗೆ ತಮ್ಮ ನಿಲುವನ್ನು ಸಹ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ ಈ ವಿಚಾರವನ್ನು ಇಷ್ಟಕ್ಕೆ ಬಿಡದೆ ಇಲ್ಲಿಂದ ಮುಂದಕ್ಕೆ ಏನು ಮಾಡಬೇಕೆಂಬ ಬಗ್ಗೆ ಆಲೋಚಿಸಿ ತಿಳಿಸಬೇಕೆಂದು ಹೇಳಬಯಸುತ್ತೇನೆ.

ಶ್ರೀ ಟಿ.ಆರ್. ಶಾಮಣ್ಣ.—ಈಗ ನಮ್ಮ ಮಂತ್ರಿಮಂಡಲದಲ್ಲಿರತಕ್ಕವರು ಕೇವಲ ೩೦ ಮಂದಿ ಮಂತ್ರಿಗಳು. ಆ ಪೈಕಿ ೧೪ ಮಂದಿ ರಾಜ್ಯ ಮಂತ್ರಿಗಳಿದ್ದಾರೆ. ತವಗೆ ಅಧಿಕಾರ ಇರುವುದರಿಂದ ಯಾರು ಆ ಹಸ್ತಕ್ಷೇಪವನ್ನು ಮಾಡಿದ್ದಾರೆಂಬ ಬಗ್ಗೆ ತಮ್ಮ ಸಹೋದ್ಯೋಗಿಗಳನ್ನು ಏಕೆ ಕೇಳಬಾರದು ? ತತ್ಸಂಬಂಧವಾಗಿ ಎಲ್ಲರಿಗೂ ಒಂದು ಸುತ್ತೋಲೆಯನ್ನು ಕಳುಹಿಸಿ ಯಾರೆಂಬುದನ್ನು ವಿಚಾರಿಸಿ ತಿಳಿಸಬೇಕೆಂದು ಹೇಳಬಯಸುತ್ತೇನೆ. ಈ ವಿಚಾರದಲ್ಲಿ ಮಂತ್ರಿಮಂಡಲದ ಮತ್ತು ಸಭೆಯ ಗೌರವಗಳು ಸೇರಿರುವುದರಿಂದ ೩೦ ಜನ ಮಂತ್ರಿಗಳನ್ನು ಕೇಳಿ ಆದಕ್ಕೆ ಸಂಬಂಧಪಟ್ಟವರು ಯಾರೆಂಬುದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ.

† ಶ್ರೀ ಬಿ.ವಿ. ಕಕ್ಕಿಲಾಯ.—ಅಧ್ಯಕ್ಷರೇ, ನ್ಯಾಯಾಧೀಶರು ಕೊಟ್ಟಿರತಕ್ಕ ಹೇಳಿಕೆ ಒಬ್ಬರ ಮೊಕದ್ದಮೆಯಲ್ಲಿ ತೀರ್ಪು ಕೊಡತಕ್ಕ ಕಾಲದಲ್ಲಿ ಈ ವಿಷಯವನ್ನು ಬಹಿರಂಗ ಪಡಿಸಿದ್ದಲ್ಲ, ನ್ಯಾಯಾಲಯದ ಕೆಲಸಕ್ಕೆ ಹೊರತಾದ ಒಂದು ಸಂತಾಪ ಸೂಚಕ ಸಭೆಯಲ್ಲಿ ಆ ಮಾತನ್ನು ಹೇಳಿದ್ದಾರೆ. ಈ ವಿಷಯವನ್ನು ಅವರು ಅಧಿಕಾರ ಸ್ಥಾನದಲ್ಲಿ ಹೇಳಿದ್ದರೆ ಅದು ಬೇರೆ ವಿಚಾರವಾಗಿತ್ತು. ಇದು ಅವರ ಔಚಿತ್ಯದ ಬಗ್ಗೆ ಪ್ರಶ್ನೆ ಮಾಡಬೇಕಾಗುತ್ತದೆ. ಶಾಸನಸಭೆಯ ಸದಸ್ಯರ ಬಗ್ಗೆ ಈ ರೀತಿ ಮಾತನಾಡುತ್ತಿರುವುದು ಇದು ಮೊದಲನೆಯದು ಏನೂ ಅಲ್ಲ. ಜಸ್ಟೀಸ್ ನರೋನ್ಹಾರವರು ವ್ಯತಿರಾಗಿದ್ದು ದುರ್ದೈವ ವಶಾತ್ ಅವರು ಇಲ್ಲ. ಇದು ಎಷ್ಟರಮಟ್ಟಿಗೆ ಸರಿ ತಪ್ಪು ಎಂದು ಕಂಡುಹಿಡಿಯುವುದೇ ಕಷ್ಟವಾಗಿದೆ. ಇವತ್ತು ಕೇಂದ್ರ ಸರ್ಕಾರಕ್ಕೆ ಹಾಗೂ ಶ್ರೇಷ್ಠನ್ಯಾಯಾಲಯಕ್ಕೆ ಇದರ ಬಗ್ಗೆ ಅವರು ದೂರು ಸಲ್ಲಿಸಿದ್ದಾರೆ. ಯಾರ ಬಗ್ಗೆಯೋ ಆರೋಪ ಮಾಡಿದರೆ ಅದನ್ನು ಪಾರ್ಲಿಮೆಂಟನಲ್ಲಿ ಚರ್ಚೆ ಮಾಡಬೇಕಾಗಿಲ್ಲ. ಕೇಂದ್ರ ಸರ್ಕಾರಕ್ಕೆ ಸೇರಿದ ವಿಚಾರವನ್ನು ಪಾರ್ಲಿಮೆಂಟಿನಲ್ಲಿ ಚರ್ಚೆ ಮಾಡಬಹುದು. ಇದು ಈ ರಾಜ್ಯಕ್ಕೆ ಸಂಬಂಧಪಟ್ಟ ವಿಚಾರ ಆದ್ದರಿಂದ ನ್ಯಾಯಾಧೀಶರು ಹೇಳಿಕೆ ಕೊಟ್ಟಿರುವ ಔಚಿತ್ಯದ ಬಗ್ಗೆ ಇವತ್ತು ನಾವು ಇಲ್ಲಿ ಯೋಚನೆ ಮಾಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ.—ಶಾಮಣ್ಣನವರು ಹೇಳಿದ್ದರಲ್ಲಿ ಅರ್ಥ ಇದೆ. ಮಾನ್ಯ ಮುಖ್ಯಮಂತ್ರಿಗಳು ಮಂತ್ರಿಮಂಡಲದ ಮೇಲೆ ಇರತಕ್ಕ ಆರೋಪವನ್ನು ಹೋಗಲಾಡಿಸಬೇಕಾದರೆ, ಜನರ ಮನಸ್ಸಿನಲ್ಲಿ ಇರತಕ್ಕ ಗೊಂದಲ ಹೋಗಲಾಡಿಸಬೇಕಾದರೆ ಪ್ರತಿಯೊಬ್ಬ ಮಂತ್ರಿಗಳನ್ನು ಖುದ್ದಾಗಿ ವಿಚಾರಿಸುವುದು ಒಳ್ಳೆಯದು,

† SRI K. PUTTASWAMY (Chamundeswari).—Madam Speaker, I am sure the Hon'ble Chief Minister would not treat this matter very lightly or as a small one. A very serious allegation is made against two members of the Cabinet by the Hon'ble Chief Justice. The complaint is one of interference with the judiciary. This cannot be treated as a very light matter and I am sure the Hon'ble Chief Minister will take it with all seriousness. The fact as it stands according to the Chief Justice, there was an interference with the

judiciary in the discharge of duties by one of the Hon'ble Justice of the High Court. He may refuse to divulge the name. But it does not mitigate the complaint and it does not lessen the gravity of the complaint against the Ministry. Therefore, I want the Chief Minister to take it up with all seriousness-whatever may be the quarters-which is the authority to tackle the justice, - an approach will have to be made to that authority and this House is entitled to know whether there was any interference by two members of the Cabinet with the judiciary or not. Otherwise an impression will be created in the S ate that there was an attempt to interfere with the Ju liciary. This fear will have to be dispelled. The Hon'ble Members may be feeling that the ball is in the Court of Chief Justice. I for one would say that it is not in the Court of Chief Justice, but it is in the Court of the Cabinet. The Chief Minister will have to make an all out efforts and see that truth or otherwise of the allegation made by the Chief Justice is cleared. I would once again appeal to the Chief Minister to take it up in all earnestness and before this session is over, atleast I am sure the Chief Minister would take this House into confidence and tell us whether there was interference or not. If there is any truth, who are the persons responsible and what action would have to be taken by the Chief Minister against such interference will have to be reported and this is entirely left to the Chief Minister.

ಶ್ರೀ ಎಚ್.ಡಿ. ದೇವೇಗೌಡ.—ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅವರು ಸ್ಟೇಟ್‌ಮೆಂಟ್‌ನಲ್ಲಿ ಏನು ಹೇಳಿದ್ದಾರೆ ? The Chief Justice has declined to to disclose the names. And his conduct cannot be discussed in the State legislature

SRI D. DEVARAJ URS.—I have clearly given what he had stated. What can I do for that ?

ಶ್ರೀ ಎಚ್.ಡಿ. ದೇವೇಗೌಡ.—ಇಲ್ಲಿ ಜಡ್ಜಸ್ ಕಾಂಡಕ್ಟ ಪ್ರಶ್ನೆ ಮಾಡಲಿಕ್ಕೆ ಬರುವುದಿಲ್ಲ. ಪತ್ರಿಕೆಯಲ್ಲಿ ಏನು ಬಂದಿದೆ ? ಯಾರೋ ಇಬ್ಬರು ಮಂತ್ರಿಗಳು ನ್ಯಾಯಾಧೀಶರ ಮೇಲೆ ಪ್ರಭಾವ ಬೀರುವುದಕ್ಕೆ ಪ್ರಯತ್ನ ಪಟ್ಟರು ಎಂದು ಬಂದಿದೆ. ಈ ಒಂದು ಕನ್‌ಕ್ಲೂಷನ್‌ಗೆ ಅವರು ಬಂದಿದ್ದಾರೆ ಇಬರು ಯಾರು ಎಂಬುದನ್ನು ದಯಮಾಡಿ ತಿಳಿಸಿ. ತಾವು ಬರೆದ ಕಾಗದ ಇದ್ದರೆ ಓದಬಹುದು. The conduct the Chief Justice cannot be discussed. But I wanted to know who are those members of the Cabinet. The issue started only after the Chief Justice made a Statement. It is not for the Chief Justice to come out. The Ball is in the Court of Ministry. ಆದನ್ನು ಒಪ್ಪಿಕೊಳ್ಳುವುದಾದರೆ, ಕಾನೂನು ರೀತ್ಯಾ ಕಾನೂನು ಚೌಕಟ್ಟಿನಲ್ಲಿ ಮುಖ್ಯ ನ್ಯಾಯಾಧೀಶರು ರಾಜ್ಯ ಸರ್ಕಾರಕ್ಕೆ ಈ ಸದನಕ್ಕೆ ತಿಳಿಸತಕ್ಕ ವಿಚಾರದಲ್ಲಿ ಅಡ್ಡಿ ಇದೆಯೆ ? ಅವರು ಒಂದು ಮಾತನ್ನು ಹೇಳಿದ್ದರೆ, ಅದು ಪತ್ರಿಕೆಯಲ್ಲಿಯೂ ಬಂದಿದೆ. ಸುಪ್ರೀಂ ಕೋರ್ಟಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಅವರ ಹೆಸರುಗಳನ್ನು ತಿಳಿಸಿದ್ದಾರೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ಅವರಂ ಬರೆದಿದ್ದಾರೋ, ಬಿಟ್ಟಿದ್ದಾರೋ ಆ ಮೂಲದಿಂದಲಾದರೂ ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬಹುದು. ನಾನು

ಕಾನೂನು ಪರಿಣತನಲ್ಲ. ಅಡ್ವೊಕೇಟ್ ಜನರಲ್ ಕರೆಸಿ ವಿಚಾರ ಮಾಡಬಹುದು. ಕಾನೂನು ಮಂತ್ರಿಗಳು ಇಲ್ಲಿಯೇ ಇದ್ದಾರೆ ಅವರು ಬೇಕಾದರೂ ಈ ಸಭೆಗೆ ತಿಳಿಸಬಹುದು. ಆದುದರಿಂದ ಈ ವಿಷಯವನ್ನು ಆಷ್ಟಕ್ಕೇ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಸುಪ್ರೀಂ ಕೋರ್ಟ್ ಅಥವಾ ಕೇಂದ್ರ ಸರ್ಕಾರದ ಮೂಲಕ ದಿಂದಾಗಲೀ ಯಾರು ಯಾರು ಎಂಬುದನ್ನು ತಿಳಿದು ವರದಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI H. SIDDAVEERAPPA (Minister of Law) —I have understood the problem, the view of the Chief Justice appears to be that this Government has no administrative control over the High Court like the subordinate Courts He is only amenable to the Union Law Minister as well as the Chief Justice of the Supreme Court. Therefore, he seems to feel that he can disclose the information to that quarter which has administrative control over the High Court. That is what I have understood.

† SRI D. DEVARAJ URS.—Madam Speaker, I thank the Hon'ble the Leader of the Opposition for the suggestion he gave that it would be worth while to know the letter that I have written and to read that letter for the benefit of this House. I have no hesitation to place this letter before this House. With your permission, Madam Speaker I want to read the letter which I wrote to the Chief Justice of Karnataka High Court on the 16th :

> "I have read certain newspaper reports of a statement made by you that Ministers of the Government of Karnataka had approached High Court Judges in an effort to influence them in their judgement You had apparently made these remarks in a public function to mourn the death of Justice D. Naronha. Your remarks have appeared in an Editorial in the DECCAN HERALD which has observed that the public has a right to know the names of these Ministers I had asked the Chief Secretary to call on you to ascertain the names of the Ministers concerned. But I understand that you were not inclined to make any official disclosure as to who they were However, as it is possible that your statement may lead to some public agitation, I shall appreciate your communicating to me the the names of the Ministers concerned as also the circumstances in which they are reported to have made an effort to to influence the judges in the exercise of their duties. A Call Attention Notice has already been moved in the Legislative Assembly which is scheduled to meet on 19th April 1977."

I should have been here on the 19th, but due to circumstances which the House knows I could not be here. So I was trying to find out the names and I wrote this letter. I do not wish to-at any rate the situation does not warrant that I should also disclose the entire

letter that has been written by the Chief Justice because he wants it to be a SECRET letter, I think that the house knows very well- I am sure they do not disbelieve me-that I have already put the gist of the letter on record through my statement. In substance, he does not want to disclose; and he says that he is going to disclose the matter to the concerned people, viz., the Chief Justice of India or the Union Law Minister. This much is a fact.

Coming to the question that was raised by Hon'ble Member Sri K. Puttaswamy that this is not a light matter and it should be taken up seriously, I am in hundred per cent agreement with what he said, viz., that this is a serious matter. Here, I would like to make one point clear. Just to disabuse the mind of those persons who might have the doubts regarding the bona fides of the Government so far as the question of taking appropriate action againt those Ministers whose conduct has been alleged in the manner in which the Chief Justice of the High Court of Karnataka has alleged. I have to proceed

In this matter in a particular manner. One suggestion by one of the hon. members was that I could have called all the 29 Ministers to know from them as to who has indulged in this misconduct or whatever you might call it. The Minister or Ministres I think should have by now volunteered themselves to tell me whether they have done so. In the event of their not telling me I presume that no one has done. What is the use of my asking ? Even if I ask they say the same thing. Whom will it satisfy I would like to know. Neither will it satisfy me nor the house. Therefore, to say that I should ask them is no remedy or solution. Now that they have not come forward to tell me at least that they had done this or not done this, I cannot presume that 'X' or and 'Y' is the culprit. I continue to presume that all of them are innocent unless it is proved to the contrary. Though I am not a lawyer, I feel that is what the law says, I have know it from lawyers that we cannot assume that a person is guilty unless it is proved, Therefore it is not proper on my part to call our Ministers and ask whether they have done it. That is not the way to deal with the matter. I never hesitate to disclose the names if I know. Unfortunately the Chief Justice has taken a different attitude and approach. I cannot compel him to disclose. At the most I can write to him; I have written to him and you know the reply that I have received. As long as he does not want to disclose I am not at all in a position to compel him to disclose. He wants to disclose the names or write to the Chief Justice of India. I do not know whether he has already written. My thinking is somewhat different, in the sense that I do not want to write unnecessarily now. I do not know what he has disclosed or what

he is going to disclose. I must carefully think whether I should ask the authority to prove that he has written. I certain that I need not write to him at this stage. If there is anything I am sure they will write to me saying that so and so are the persons. The matter might be between two persons. I do not know at this stage what is what. I do appreciate and agree that this is a serious matter. I also want to make it categorically clear in this house that if the allegation is proved to be true whoever is the Minister, I do not hesitate to hear and now to declare that he has to go. There is no second opinion in this matter. No Minister is supposed to indulge in this kind of influenceing a judge whetner he is a high court judge or even a munsiff. Nobody has a right to influence even a munsiff even in the constituency, let alone a judge. May be the people sitting in a club might talk all sorts of things but constitutionally they have no right to talk like this.

2-30 P M.

SRI M. S. KRISHNAN.— Is it correct on the part of the Chief Justice to have spoken in the public in the manner in which he has spoken and said that some two ministers are concerned with it The propriety demands that he should have written to you as the Chief Minister and you could have tackled the particular Ministers if they had committed any impropriety and also brought to the notice of the public. Now it looks as though the Chief Justice whether he has written to you or not, when he has come to open, don't you think that as the Chief Minister you should have defended your position ?

SRI D. DEVARAJ URS.—The question of defending or taking action at this stage, in my opinion, does not arise at all. As you yourself just now mentioned I do not know what prompted the Chief Justice to make such a statement on an occasion which was outside the court also, when they were holding a condolence meeting. I do not want to say anything about it it is for others to judge the propriety or otherwise of the Chief Justice talking in that strain. I can assure you at this stage, I have not received a single letter or any information regarding the alleged statement of the involvement of two Ministers by the Chief Justice. I have come to know only through the press and nothing else. That is also a fact, Now the question is, in the absence of any information, what kind of action I should take against whom and for what purpose, If it is a matter concerning between the Chief Justice of the Karnataka High Court and the Chief Justice of the Supreme Court, then how can I come into the picture At this stage, I am not in a position to write to the Chief Justice of India. Here is a situation where the Chief Justice of Karnataka

makes a statement in the public on an occasion like this and it appears in the press saying that he is going to disclose the names only to the Chief Justice of India. I cannot go on presuming things in the absence of his disclosing the names of those Ministers. He has taken a stand that constitutionally he is not bound to disclose these names ; but as long as they are not disclosed I cannot take notice of whatever he has said. That is what I can say at this stage. I can not say now that the two Ministers are culprits; it is thoroughly wrong on my part to presume like that; let the whole thing come out from the other end. I am sure the Leader of the Opposition would agree with me that there is no point in my writing to the Chief Justice to intimate the names of those Ministers who have tried to influence the Judge. Merely because a Statement appears in the press, I am not prepared to accept it.

SRI K. PUTTASWAMY.— It is the not duty of the Government to contact the Chief Justice and obtain the information ?

SRI D. DEVARAJ URS. — I cannot take up every responsibility upon myself. As you yourself agree that the Chief Justice should not have made the statement in the public I do not want to pass any remarks against the Chief Justice.

ಶ್ರೀ ಎಚ್. ಡಿ. ದೇವೇಗೌಡ — ಮಾನ್ಯ ಅಧ್ಯಕ್ಷಣಿಯಂವರೇ, ಮಾನ್ಯ ಮಂಂಖ್ಯಿ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ತರಬಯಸುತ್ತೇನೆ. ಅವರ ಭಾಷಣ ಪೂರ್ತಿಯಾಗಂವುದರಲ್ಲಿ ನಮಗೆ ಉತ್ತರ ಹೇಳಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈಗ ಪ್ರಪ್ರಥಮವಾಗಿ ಬಂದಿರುವ ಆಪಾದನೆ ಎಂದರೆ ಇಬ್ಬರು ಮಂತ್ರಿಗಳ ಮೇಲೆ ಅವರು ಈ ಸದನದ ಆಥವಾ ಆ ಸದನದ ಸದಸ್ಯರು ಇರಬಹುದು. ಅವರು ಯಾರೇ ಆಗಲಿ, ಅವರ ಕಾಂಡಕ್ಟ್ ಬಗ್ಗೆ ಯಾರಾದರೂ ಪ್ರಶ್ನೆ ಮಾಡುವುದಾದಕೆ ಬಹುಶಃ It amounts to privilege The Chief Justice of High Court has got the right to question the privilege of the members of this house. ಎಂದು ಹೇಳುವುದಾದರೆ ದಯವಿಟ್ಟು ಇದರ ಬಗ್ಗೆ ಒಂದು ವಿವರಣೆಯನ್ನು ಕೊಡಬೇಕು. ಒಬ್ಬ ಉನ್ನತ ವ್ಯಕ್ತಿಯ ಬಗ್ಗೆ ಅವರ ಕಾಂಡಕ್ಟ್ ಬಗ್ಗೆ ಪ್ರಶ್ನೆ ಮಾಡುವುದಾದರೆ ಅದು ನಮ್ಮ ಮೂಲಭೂತವಾದ ಹಕ್ಕುಭಾದ್ಯತೆಗೆ ಚ್ಯುತಿ ಬರುತ್ತದೆಂದು ಹೇಳಬೇಕಾಗುತ್ತದೆ ಇವತ್ತು ಒಬ್ಬ ಸದಸ್ಯನಾಗಿರುವವರು ನಾಳೆ ಮಂತ್ರಿಯಾಗಬಹುದು, ಆಗಲಾದರೂ ಇದು ಬಂದೇ ಬರುತ್ತದೆ. ಆದುದರಿಂದ ಈ ದಿವಸ ಬಂದಿರತಕ್ಕ ವಿಚಾರ ಏನಿದೆ, ಇದು ಬಹಳ ತೀವ್ರತರವಾಗಿರುವುದರಿಂದ ಇದನ್ನು ಎಲ್ಲರೂ ಯೋಚನೆ ಮಾಡಬೇಕಾದ್ದು ಅವಶ್ಯಕವಿದೆ. ಇದನ್ನು ಇಷ್ಟಕ್ಕೆ ನಿಲ್ಲಿಸಂವುದಕಾಗದೆವುದಿಲ್ಲ. ತಾವು ಇದರ ಬಗ್ಗೆ ಗಮನ ಹರಿಸಿ ಒಬ್ಬ ಅಡ್ವೊಕೇಟ್ ಜನರಲ್‌ನ್ನು ತಕ್ಷಣ ಕರೆಸಿ ವಿಚಾರ ಮಾಡಬೇಕು. ಹೈಕೋರ್ಟ್ ಆಡ್ಮಿನಿಸ್ಟ್ರೇಷನ್ ಸುಪ್ರೀಂ ಕೋರ್ಟಿನ ವಾಪ್ತಿಯಲ್ಲಿ ಬಂತ್ತದೆ. ನಿವೇಗೆ ಇರುವಂತೆ ನಮಗೂ ಪ್ರಿವಿಲೇಜು ರಾಜ್ಯಾಂಗದ ಚೌಕಟ್ಟಿನಲ್ಲಿ ಆಳವಡಿಸಿದ್ದಾರೆ ಎಂಬುದನ್ನು ತಾವು ಮರೆಯಬಾರದು.

ಅಧ್ಯಕ್ಷರು.— ತಾವು ಪ್ರಿವಿಲೇಜ್, ಪ್ರಿವಿಲೇಜ್ ಎಂದು ಹೇಳುತ್ತಿದ್ದೀರಿ. ಹೌಸ್‌ನಿಂದ ಹೊರಗಡೆ ಏನಾದರೂ ಇಂಥಾದ್ದು ನಡೆದರ ಅದಕ್ಕೆ ಏನು ಮಾಡುವುದಕ್ಕಾಗುತ್ತದೆ ? That does not become a privilege.

ಶ್ರೀ ಎಚ್. ಡಿ. ದೇವೇಗೌಡ.— ಮಾನ್ಯ ಅಧ್ಯಕ್ಷಣಿಯವರೇ, ಈ ವಿಚಾರ ಅಷ್ಟೊಂದು ಸುಲಭವಾಗಿ ಬಿಡುವಂಥಾದ್ದಲ್ಲ. ಆದುದರಿಂದ ತಾವು ಇದರ ಬಗ್ಗೆ ಸ್ಥೂಲವಾಗಿ ಪರಿಶೀಲನೆ ಮಾಡಿ ಆನಂತರ ರೂಲಿಂಗ್ ಕೊಡಿ. ಏಕೆಂದರ ಇದು ಅಂಥ ಗಹನವಾದ ವಿಚಾರ ಹಿಂದೆ ಕೂಡ ಒಂದು ಸಾರಿ ಒಬ್ಬ

ಲೆಜಿಸ್ಲೇಚರ್ ಮೇಲೆ ಒಂದು ಅಪಾಧನೆ ಪತ್ರಿಕೆಯಲ್ಲಿ ಬಂದಿತು. ಆ ಘಟನೆಯನ್ನು ಇಲ್ಲಿ ತಾವು ಸ್ಮರಿಸಿ ಕೊಳ್ಳಬಹುದು. ಈ ವಿಷಯವನ್ನು ಇಲ್ಲಿಗೇ ನಿಲ್ಲಿಸದೇ ಸುಪ್ರೀಂಕೋರ್ಟ್‌ಗೆ ಪತ್ರ ಬರೆದು ತಿಳಿದುಕೊಳ್ಳಬೇಕು. ಅಡ್ವೊಕೇಟ್ ಜನರಲ್‌ನ್ನು ಇಲ್ಲಿ ಕರೆಸಿ ವಿಚಾರ ಮಾಡಿ, ಏಕೆಂದರೆ ಯಾರಾದರೂ ಒಬ್ಬ ವ್ಯಕ್ತಿ ಸರ್ಕಾರದ ಮೇಲೆ ಆಗಲಿ, ಸದಸ್ಯರ ಮೇಲೆ ಆಗಲಿ, ಗೂಬೆ ಕೂಡಿಸುವುದಕ್ಕೆ ಹೋದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅವರು ಈ ಒಂದು ಹೇಳಿಕೆಯನ್ನು ಕೊಡಬೇಕಾದರೆ ಬಹಳ ಜವಾಬ್ದಾರಿಯಿಂದಲೇ ಹೇಳಿರುತ್ತಾರೆ. ಈ ವಿಷಯ ಪಾರ್ಲಿಮೆಂಟ್‌ನಲ್ಲಿ, ಶಾಸನ ಸಭೆಯಲ್ಲೂ ಬರಬಹುದು. ತಾವು ಈ ವಿಷಯವನ್ನು ಇಷ್ಟಕ್ಕೆ ಬಿಡಲು ಅವಕಾಶವನ್ನು ಕೊಡುವಷ್ಟು ಈ ಸಭೆ ಬಲಹೀನವಾಗಿಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ದೇವೇಗೌಡರು ಹೇಳಿದ ಹಾಗೆ ಇದು ಒಂದು ಪ್ರಿವಿಲೇಜ್ ಪ್ರಶ್ನೆ ಎಂಬುದಾಗಿ ಯೋಚನೆ ಮಾಡಬೇಕಾಗುತ್ತದೆ ಸಾಧಾರಣವಾಗಿ ಮಂತ್ರಿಗಳ ವ್ಯಕ್ತಿತ್ವದ ಬಗ್ಗೆ ಟೀಕೆ ಮಾಡಿದ್ದಾರೆ ಅದು ಬೇರೆ ವಿಚಾರ ಆದರೆ ಇಲ್ಲಿ ಒಬ್ಬ ಚೀಫ್ ಜಸ್ಟೀಸ್ ಆಪಾದನೆಯನ್ನು ಮಾಡಿರ ತಕ್ಕಂಥಾದು ಇರುತ್ತದೆ ಇದನ್ನು ಹಾಗೆಯೇ ಮೇಲಿಂದಮೇಲೆ ಮಾತನಾಡಿ ತಳ್ಳಿಹಾಕುವುದಕ್ಕೆ ಆಗುವುದಿಲ್ಲ ಇದು ಒಂದು ಆಳವಾದ ಪ್ರಶ್ನೆಯಾಗಿರುತ್ತದೆ. ಜ್ಯುಡಿಷಿಯಲ್ ಫಂಕ್ಷನ್‌ಗೂ ಮತ್ತು ಎಕ್ಸಿಕ್ಯುಟೀವ್ ಫಂಕ್ಷನ್‌ಗೂ ಯಾವ ರೀತಿಯಾದ ಸಂಬಂಧ ಇರಬೇಕು ಮತ್ತು ಎಕ್ಸಿಕ್ಯುಟೀವ್ ಫಂಕ್ಷನ್ ಮಾಡುವುದಕ್ಕೆ ಲೆಜಿಸ್ಲೇಚರ್‌ಗೂ ಜ್ಯುಡಿಷಿಯರಿಗೂ ಏನು ಸಂಬಂಧವಿರಬೇಕು ಎಂಬುದರ ಬಗ್ಗೆ ಗಮನಿಸಬೇಕು. ಇದರಿಂದ ಈ ಇನ್ನೂ ಪ್ರಶ್ನೆಯನ್ನು ಇನ್ನೂ ಆಳವಾಗಿ ಆಲೋಚನೆ ಮಾಡಿದರೆ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ತೆಗೆದುಕೊಳ್ಳಬೇಕೇ ಬೇಡವೇ ಎನ್ನುವ ವಿಷಯದಲ್ಲಿ ಅವರು ಒಂದು ಅಭಿಪ್ರಾಯಕ್ಕೆ ಬರಬಹುದು ಚೀಫ್ ಜಸ್ಟೀಸ್ ಈ ರೀತಿಯಾಗಿ ಬಹಿರಂಗವಾಗಿ ಮಾತನಾಡಿದ್ದು ಸರಿಯೇ ಎನ್ನುವುದನ್ನು ಯೋಚನೆ ಮಾಡಬಹುದು ಆ ವಿಷಯ ನಿಜವಾಗಿದ್ದ ಪಕ್ಷದಲ್ಲಿ ಅವರು ಯಾವ ಮಂತ್ರಿಯೇ ಆಗಿರಲಿ, ಅವರ ಬಗ್ಗೆ ಸೂಕ್ತವಾದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಮುಖ್ಯ ಮಂತ್ರಿಗಳು ಮುಂದೆ ಬರಬೇಕು. ಇದು ಅಷ್ಟು ಸುಲಭವಾದ ವಿಷಯವಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಕ್ರಿಮಿನಲ್ ಕೇಸ್‌ನಲ್ಲಿ ಇನ್‌ವಾಲ್ವ್ ಆಗಿರುತ್ತಾರೆಂದು ಮಂತ್ರಿಗಳ ಮೇಲೆ ಆಪಾದನೆ ಮಾಡಿದ್ದಾರೆ ಪತ್ರಿಕೆಯಲ್ಲಿ ಪ್ರಕಟವಾಗಿರುವ ರೀತಿಯಲ್ಲಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ. The State Government approached Sri Naronha to influence him in a criminal case in which the Ministers were allegedly involved ಆದುದರಿಂದ ಯಾರ ಮೇಲೆ ಕ್ರಿಮಿನಲ್ ಕೇಸ್ ಇತ್ತು ಎನ್ನುವುದನ್ನಾದರೂ ಕೂಡ ತಿಳಿದುಕೊಳ್ಳಲು ಸಾಧ್ಯವಿದೆ. ಈ ಕೆಲಸವನ್ನು ಮಾಡಬೇಕೆಂದು ಅಧ್ಯಕ್ಷರ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಕ್ರಿಮಿನಲ್ ಕೇಸ್‌ನಲ್ಲಿ ಇಬ್ಬರು ಸಚಿವರು ಇನ್‌ವಾಲ್ವ್ ಆಗಿರುತ್ತಾರೆಂದು ಚೀಫ್ ಜಸ್ಟೀಸ್ ಹೇಳಿರುವುದು. ಅದನ್ನು ನಾನು ಹೇಳಿದ್ದಲ್ಲ. ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಿ.

Whether it was a criminal case against one minister or two minister I am not aware of all those matters at this stage. I have merely stated what the Chief Justice has said. It is not my statement.

Madam Speaker, I agree that there are several issues involved in in this particular instance or this particular episode. But one thing the Hon. members are stating again and again and that is that this matter should not be taken lightly. I do not know why the Hon. members have got that impression that the Goverament has taken it lightly. I am as serious as this House is, as the Hon. members are. But, simply because I am serious what do they want me to do at once ? This is a matter. as you have yourself put it, which has to be looked

into from many angles carefully and legal and constitutional aspects have to be gone into. Here is an instance where the Chief Justice makes a statement in public at a certain function which appears in the press. Now an issue is raised whether it amounts to privilege and the Hon. Speaker remarked that it may not amount to privilege. That is a point on which we have think carefully whether it amounts to privilege. The Hon. Speaker may give her ruling at the appropriate time. That is one aspect. Another aspect is, whether it becomes an issue of the House as such or whether it is meant only for the Government. The Hon. members are asking me again and again to write to the Chief Justice of India. Whether it is to the Chief Justice of India or to the Union Law Minister I can write on behalf of this House. Therefore to what extent the House is concerned with this, is an important question. Supposing the names had been disclosed and I had brought out the names here, certainly the hon. members would have raised an issue as to how we should deal with them, whether they should be in the cabinet or not. All these issues would arise. In the absence of this thing I still assert and say whoever the minister, unless the names are disclosed, he continues to be innocent I am sure the House will agree. Otherwise we are laying down very erroneous and dangerous precedents Therefore I am not in a position to act unless it is proved to the satisfaction of this House or to Government. It can also be presumed that the Chief Justice of Karnataka High Court who is such a responsible person, holding a high office, certainly must be having some proof. Otherwise how could he make such a statement. That is also probable, How can we say that he might have made a statement in a light-hearted manner? I dare not say so.

SRI H-D. DEVE GOWDA.—We too cannot say that.

SRI D. DEVARAJ URS.—True, no body can say that.

SRI A. SHANKAR ALVA —The statement was made by the Chief Justice at a function. It is now for the Chief Minister to say that none of the ministers have approached that Judge, in connection with any case, If that is done the ball will be in his court. Let the Hon. Chief Minister say that. I think that is the last thing that can be done,

†ಶ್ರೀ ಟಿ.ಎಂ ಮಂಜುನಾಥ್.—ದೇಶದ ಉನ್ನತ ಮಟ್ಟದಲ್ಲಿರತಕ್ಕಂಥ ಒಬ್ಬ ಚೀಫ್ ಜಸ್ಟೀಸ್ ಹೇಳಿರತಕ್ಕಂಥ ಈ ಮಾತನ್ನು ವಿನಾಕಾರಣದಿಂದ ತಳ್ಳಿಹಾಕತಕ್ಕಂಥ ವಿಚಾರವಲ್ಲ ಹಿಂದೆ ಒಬ್ಬ ಮಂತ್ರಿ ಯವರ ಮೇಲೆ ಆಪಾದನೆ ಮಾಡಿದಾಗ ಅವರು ತಪ್ಪು ಮಾಡಿದ್ದಾರೆಂದು ವಿಚಾರಣೆಯಾಗುವುದಕ್ಕೆ ಮಂಜೂರಾತಿಯಾಗಿಯೇ ಅವರನ್ನು ಪದವಿಯಿಂದ ತೆಗೆದು ಮತ್ತೆ ಪರಿಶೀಲನೆಯಾದ ನಂತರ ಅವರನ್ನು ತೆಗೆದುಕೊಂಡಿರುವುದನ್ನು ನಾವು ನೋಡಿದ್ದೇವೆ. ಮಾನ್ಯ ಅಧ್ಯಕ್ಷರೇ ಯಾವುದೇ ಕಾರ್ಯದಲ್ಲಾಗಲಿ ಕರ್ತವ್ಯಚ್ಯುತಿ ಮಾಡಿದ್ದರಿಂದ ಇವತ್ತಿನ ದಿವಸ ಮಂತ್ರಿಗಳವರು ಮೊಕದ್ದಮೆಯಲ್ಲಿ ಜಡ್ಜಸ್‌ಗೆ ಇನ್‌ಫ್ಲು

ಯೆನ್ಸ್ ಮಾಡಿದ್ದಾರೆಂದು ಚೀಫ್ ಜಸ್ಟೀಸ್ ಹೇಳಿದ್ದಾರೆ. ಇದನ್ನು ಒಬ್ಬ ಸಾಧರಣ ಮನುಷ್ಯ ಹೇಳ ತಕ್ಕಂಥ ಮಾತಲ್ಲ. ಆದ್ದರಿಂದ ತಮ್ಮ ಮುಖಾಂತರ ಮಾನ್ಯ ಮಂಖ್ಯಿ ಮಂತ್ರಿಗಳವರಲ್ಲಿ ನಾನು ಕೇಳಿ ಕೊಳ್ಳುತ್ತೇನೆ. ಇವತ್ತು ಸರ್ಕಾರದ ಮೇಲೆ ಬಂದಿರತಕ್ಕ ದೂರನ್ನು ಹೋಗಲಾಡಿಸಬೇಕಾದರೆ ಇದಕ್ಕೆ ಸಂಬಂಧಪಟ್ಟಿಂತಹ ಮಂತ್ರಿಗಳು ಇದ್ದಾರೆಯೇ ಅಥವಾ ಇಲ್ಲವೇ ಎನ್ನತಕ್ಕಂಥಾದ್ದನ್ನು ತಿಳಿದುಕೊಳ್ಳಿ ಬೇಕಾದುದು ನಮ್ಮ ಮಂಖ್ಯಿ ಉದ್ದೇಶವಾಗಿರುವುದರಿಂದ ಅವರು ಯಾವ ರೂಪದಲ್ಲಿ ಈ ಮಂತ್ರಿ ಮಂಡಲದಲ್ಲಿದ್ದಾರೆಯೇ ಇಲ್ಲವೇ ಎಂಬುದನ್ನು ಮಾನ್ಯ ಮಂಖ್ಯಿ ಮಂತ್ರಿಯವರು ಹೇಳಬೇಕೆಂದು ನಮ್ಮೆಲ್ಲರ ಬೇಡಿಕೆಯಾಗಿದೆ.

ಶ್ರೀ ಎಸ್.ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ ಇಂತಹ ಒಂದು ಲೀಗಲ್ ಪಾಯಿಂಟ್ ಬರ ಬೇಕಾದರೆ, ಅಂತಹ ಮಹತ್ವಪೂರ್ಣ ಮನುಷ್ಯನ ಸ್ಟೇಟ್‌ಮೆಂಟ್ ಸಹ ಅಷ್ಟೇ ಮಹತ್ವಪೂರ್ಣವಾಗಿ ಇರುತ್ತದೆ ಎಂಬುದು ಗೊತ್ತಾಗುತ್ತದೆ ಆ ಸ್ಟೇಟ್‌ಮೆಂಟಿನಲ್ಲಿ ಮಹತ್ವದ ವಿಷಯ ಇದೆಯೆಂದು ಹೇಳಿದ್ದಾರೆ ಚೀಫ್ ಜಸ್ಟೀಸ್ ಅವರೇ ಸ್ಟೇಟ್‌ಮೆಂಟ್ ಕೊಟ್ಟಿರಬೇಕಾದರೆ ಅದು ಮಹತ್ವದ ವಿಷಯ ವೆಂದು ನಾನೂ ಹೇಳುತ್ತೇನೆ ಅವರು ಜವಾಬ್ದಾರಿ ಹೊತ್ತಂಥವರು ಸುಮ್ಮನೆ ಸ್ಟೇಟ್‌ಮೆಂಟ್ ಕೊಡುತ್ತಾರೆ ಎಂದು ಹೇಳಿದರೆ ಅದನ್ನು ಇನ್‌ಡೈರೆಕ್ಟ್ ಆಗಿ ಹೇಳಬೇಕಾಗುತ್ತದೆ. ಆದ್ದರಿಂದ ಅವರು ಹೇಳಿರುವುದು ಸತ್ಯ ಎಂದು ನಾನು ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ನಾವು ಶ್ರೇಷ್ಠ ನ್ಯಾಯಾಧೀಶರ ನಡತೆಯ ವಿಚಾರವಾಗಿ ಇಲ್ಲಿ ಚರ್ಚೆ ಮಾಡುತ್ತಾ ಇಲ್ಲ ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯಿಂದ ಮಂತ್ರಿಮಂಡಲದ ಇಬ್ಬರು ಸದಸ್ಯರ ಮೇಲೆ ಶ್ರೇಷ್ಠ ನ್ಯಾಯಾಧೀಶರು ಆರೋಪಣೆ ಮಾಡಿದ್ದಾರೆ ಎಂಬುದು ಖಚಿತವಾಗಿ ವ್ಯಕ್ತಪಟ್ಟಿದೆ ಮಂತ್ರಿ ಮಂಡಲದ ಸದಸ್ಯರಿಬ್ಬರು ನ್ಯಾಯಾಂಗದಲ್ಲಿ ಹಸ್ತಕ್ಷೇಪ ಮಾಡಿದ್ದಾರೆ ಎನ್ನತಕ್ಕಂಥ ಆರೋಪಣೆಯನ್ನು ಮಾಡಿದ್ದಾರೆ. ಇದರಲ್ಲಿ ಅವರು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ, ಅವರ ತಲೆ ಹೋಗಬೇಕಾಗುತ್ತದೆ. ಇದರಲ್ಲಿ ಯಾವ ವಿಧವಾದ ಸಂಶಯವಿಲ್ಲ. ಮಾನ್ಯ ಮಂಖ್ಯಿ ಮಂತ್ರಿಯವರ ಹೇಳಿಕೆಯಿಂದ ನನ್ನ ಮನಸ್ಸಿ ನಲ್ಲಿ ಉಂಟಾಗಿರುವ ಭಾವನೆ ಏನೆಂದರೆ ತಮ್ಮ ಮಂಟ್ಟಿಗೆ ಈ ಪ್ರಸಂಗವನ್ನು ಇಲ್ಲಿಗೇ ಕೈಬಿಡುತ್ತೇನೆ ಎನ್ನುವ ತರಹದಲ್ಲಿ ಹೇಳಿದ್ದಾರೆ. ಇದರ ಬಗ್ಗೆ ಇಂಡಿಯಾ ಸರ್ಕಾರವೇ ಆಗಲಿ ಅಥವಾ ಶ್ರೇಷ್ಠ ನ್ಯಾಯಾಧೀಶರೇ ಆಗಲಿ ಆ ಮೂಲದಿಂದ ಒಂದಿರತಕ್ಕಂಥ ವಿಷಯವನ್ನು ಸಂಗ್ರಹಿಸುವುದಿಲ್ಲವೆಂದು ಹೇಳಿದ್ದಾರೆ ಆದ್ದರಿಂದ ಅವರು ಈ ಒಂದು ಪ್ರಸಂಗವನ್ನು ಇಲ್ಲಿಗೇ ಕೈಬಿಟ್ಟಾಂತಾಯಿತು ಶ್ರೇಷ್ಠ ನ್ಯಾಯಾಧೀಶರು ಈ ಮಂತ್ರಿ ಮಂಡಲದ ಇಬ್ಬರು ಸದಸ್ಯರ ಮೇಲೆ ನ್ಯಾಯ ವಿತರಣೆಯಲ್ಲಿ ಹಸ್ತಕ್ಷೇಪ ಮಾಡಿದ್ದಾರೆಂದು ಸ್ಪಷ್ಟವಾಗಿ ಆರೋಪಣೆ ಮಾಡಿರುವುದರಿಂದ ಇದನ್ನು ಇಲ್ಲಿಗೆ ಕೈ ಬಿಡತಕ್ಕಂಥ ಸಮಸ್ಯೆ ಇದಲ್ಲವೆಂದು ನಾನು ಹೇಳುತ್ತೇನೆ ಅವರು ಇಬ್ಬರು ಮಂತ್ರಿಗಳ ಹೆಸರನ್ನು ಇವರಿಗೆ ತಿಳಿಸುವುದಿಲ್ಲವೆಂದು ಹೇಳಿದ್ದಾರೆ. ಅವರು ಅದೇ ಕಾಗದದಲ್ಲಿ ಆ ವಿಚಾರವನ್ನು ಉಚ್ಚ ನ್ಯಾಯಾಧೀಶರಿಗೆ ಹಾಗೂ ಇಂಡಿಯಾ ಸರ್ಕಾರದ ನ್ಯಾಯಾಂಗ ಮಂತ್ರಿಗಳಿಗೆ ತಿಳಿಸಿದ್ದಾರೆಂದು ಹೇಳಿದ್ದಾರೆ. ಆದ್ದರಿಂದ ಈ ವಿಚಾರವನ್ನು ತಿಳಿದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅವಕಾಶ ಇದೆ. ಈ ವಿಚಾರವನ್ನು ಸರ್ಕಾರದವರು ತಿಳಿದುಕೊಳ್ಳುವುದಿಲ್ಲವೆಂದರೆ ಇದರಲ್ಲಿ ತಪ್ಪು ಮಾಡಿದಂತಾಗುತ್ತದೆ. ಶ್ರೇಷ್ಠ ನ್ಯಾಯಾದೀಶರು ಮಾಡಿರತಕ್ಕಂಥ ಹೇಳಿಕೆಯಲ್ಲಿ ಹುಳುಕು ಇದೆ ಅವರು ಸತ್ಯಾಂಶ ಇರತಕ್ಕಂಥ ಹೇಳಿಕೆಯನ್ನು ಕೊಟ್ಟಿರುವುದರಿಂದ ಇದರಲ್ಲಿ ಯಾರು ತಪ್ಪು ಮಾಡಿದಾರೆಯೋ ಅವರಿಗೆ ಶಿಕ್ಷೆ ಆಗಬೇಕಾಗುತ್ತದೆ; ಅವರ ತಲೆ ಹೋಗಬೇಕಾಗುತ್ತದೆ. ಶ್ರೇಷ್ಠ ನ್ಯಾಯಾಧೀಶರ ಹೇಳಿಕೆಯಲ್ಲಿ ಯಾವುದೂ ಸತ್ಯಾಂಶ ಇಲ್ಲದೆ ಇದ್ದರೆ ಈ ಸಭೆಯಲ್ಲಿ ಶ್ರೇಷ್ಠ ನ್ಯಾಯಾಧೀಶರ ನಡವಳಿಕೆಯನ್ನು ಚರ್ಚೆ ಮಾಡುವುದಕ್ಕೆ ಅವಕಾಸವಿಲ್ಲದಿದ್ದರೂ ಅದನ್ನು ಎಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆಯೋ ಅಲ್ಲಿ ಚರ್ಚೆಗೆ ತರಬೇಕಾಗುತ್ತದೆ. ಈ ಕಾರಣದಿಂದ ಮಾನ್ಯ ಮಂಖ್ಯಿ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ ಈ ಪ್ರಸಂಗವನ್ನು ಇಲ್ಲಿಗೆ ಕೈ ಬಿಡತಕ್ಕಂಥ ಪ್ರಸಂಗ ಅಲ್ಲವೆಂದು ಹೇಳುತ್ತೇನೆ. ಆದ್ದರಿಂದ ಮಾನ್ಯ ಮಂಖ್ಯಿ ಮಂತ್ರಿಯವರು ಇದನ್ನು ದೀರ್ಘವಾಗಿ ವಿಚಾರ ಮಾಡ ಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಈ ಬಗ್ಗೆ ಏನು ಮಾಡುತ್ತಾರೆಂದು ಅವರು ಹೇಳಲಿ.

ಶ್ರೀ ಕೆ.ಎಫ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಇದರಲ್ಲಿ ನಮಗೆ ಸಂಶಯ ಇರುವುದರಿಂದ ಇದರ ಬಗ್ಗೆ ಮಾತನಾಡುವುದಕ್ಕೆ ನವ್ಮಂತಹವರಿಗೆ ಅವಕಾಶವನ್ನು ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಇದರಲ್ಲಿ ಏನಾಗಿದೆ ಎಂದರೆ ಈ ಘಟನೆ ನಡೆಯಿಂತೇ ಇಲ್ಲವೇ ಎಂಬ ಪ್ರಶ್ನೆ ನಮ್ಮ ಮುಂದೆ

ಇದೆ. ಈ ಘಟನೆಗೆ ಸಂಬಂಧಪಟ್ಟವರು ಯಾರು ಯಾರು ಇದ್ದಾರೆ ಅವರ ಹೆಸರನ್ನು ಇಲ್ಲಿ ಹೇಳುವುದಿಲ್ಲ ವೆಂದು ಹೇಳಿದ್ದಾರೆ ಚೀಫ್ ಜಸ್ಟೀಸ್ ಅವರು ಈ ಘಟನೆ ನಡೆದಿದೆ ಎಂದು ಅಸರ್ಟ್ ಮಾಡುತ್ತಿದ್ದಾರೆಯೇ ಅಥವಾ ಡಿನೈ ಮಾಡುತ್ತಿದ್ದಾರೆಯೇ ಎಂಬುದು ಮತ್ತೊಂದು ಮಹತ್ವವಾದ ಪ್ರಶ್ನೆ. ಇವತ್ತು ಮಾನ್ಯ ಮುಖ್ಯ ಮಂತ್ರಿಯವರು ಈ ಬಗ್ಗೆ ಈ ಒಂದು ಘಟನೆ ನಡೆದಿದಯೇ, ನಡೆದಿಲ್ಲವೇ ಎಂಬುದರ ಬಗ್ಗೆ ಮಂತ್ರಿಮಂಡಲದಲ್ಲಿ ತಮಗೆ ವಿಶ್ವಾಸ ಬರುವ ರೀತಿಯಲ್ಲಿ ಪರೀಕ್ಷೆ ಮಾಡಿಕೊಳ್ಳಲಿ ಅವರು ತಮ್ಮಲ್ಲೇ ಪರೀಕ್ಷೆ ಮಾಡಿಕೊಂಡು ಇಂತಹ ಘಟನೆ ನಮ್ಮ ಮಂತ್ರಿಮಂಡಲದಿಂದ ನಡೆಯಲಿಲ್ಲ ಎಂದು ಹೇಳಿದೇ ಇದ ಪಕ್ಷದಲ್ಲಿ ಶಾಸಕಾಂಗಕ್ಕೆ ಇದ್ದಂತಹ ಒಂದೇ ಮಹತ್ವದ ಸಂಪರ್ಕ ಏನಿದೆ ಅದು ಪೂರಾ ಕೆಟ್ಟುಹೋಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಎಚ್.ಟಿ ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಜವಾಬ್ದಾರಿಯುತವಾದ ಸ್ಥಾನದಲ್ಲಿರತಕ್ಕ ಒಬ್ಬರು ಈ ಒಂದು ಗುರುತರವಾದ ಆಪಾದತೆಯನ್ನು ಮಾಡಿದ್ದಾರೆ ಎನ್ನತಕ್ಕಂಥಾದ್ದೂ ನಿರ್ಮಿವಾದದ ವಿಚಾರವಾಗಿದೆ ಆದರೆ ಈ ಆಪಾದನೆಯನ್ನು ರುಜುವಾತು ಮಾಡುವಂತಹ ಕಾಲದಲ್ಲಿ ಅದನ್ನೂ ಸಹ ಯೋಚನೆ ಮಾಡಬೇಕಾದಂತಹ ವಿಚಾರವಾಗಿದೆ ಇದರಲ್ಲಿ ನಮಗೆ ಇಬ್ಬರು ಮುಖ್ಯ ವ್ಯಕ್ತಿಗಳು ಬೇಕಾಗಿದೆ ಇದರಲ್ಲಿ ಒಬ್ಬರು ಸತ್ತುಹೋಗಿರತಕ್ಕಂಥ ವ್ಯಕ್ತಿ ಶ್ರೀ ನರೋನ್ಹ ಅವರು..... ..

ಅಧ್ಯಕ್ಷರು.—ಅವರನ್ನು ಕರೆಸಬೇಕೆ

(ಸಭೆಯಲ್ಲಿ ನಗು)

3-00 P.M.

Sri H. T. Krishnappa.—What I want to impress is that in order to establish any charge of allegation, we have to follow the principles laid down in the evidence Act.

ಮಾನ್ಯ ಅಧ್ಯಕ್ಷರೇ ಈ ಪ್ರಶ್ನೆಯನ್ನು ಬಹಳ ಲಘುವಾಗಿ ತೆಗೆದುಕೊಳ್ಳತಕ್ಕದ್ದು ಅಲ್ಲ. ಇಂಥ ಹಗರಣಗಳಂ ಏಕೆ ಹುಟ್ಟಿಕೊಳ್ಳುತ್ತವೆ ಎಂದರೆ ಜವಾಬ್ದಾರಿಯುತವಾದ ಸ್ಥಾನದಲ್ಲಿರತಕ್ಕವರು ಹೆಚ್ಚು ಜವಾಬ್ದಾರಿಯುತವಾಗಿ ನಡೆದುಕೊಳ್ಳದೆ ತಪ್ಪು ಮಾಡುವುದರಿಂದ ಎಂದು ನನಗನ್ನಿಸುತ್ತದೆ ಮಾನ್ಯ ಮುಖ್ಯ ಮಂತ್ರಿಗಳು ಪತ್ರಿಕೆಯಲ್ಲಿ ಆ ಪರದಿಯನ್ನು ಓದಿದ ಕೂಡಲೇ ಅವರ ಭಾಗದ ಕರ್ತವ್ಯ ಏನು ಇತ್ತು ಅದನ್ನು ಮಾಡಿದ್ದಾರೆ; ಮತ್ತು ಉತ್ತರವನ್ನು ಪಡೆದಿದ್ದಾರೆ. ಯಾವ ಮಂತ್ರಿಗಳು ನ್ಯಾಯಾಂಗದ ಆಡಳಿತದಲ್ಲಿ ಕಸ್ತಕ್ಷೇಪ ಮಾಡಿದ್ದಾರೆಂಬ ಬಗ್ಗೆ ಸ್ಪಷ್ಟವಾದ ಉತ್ತರ ಸಿಕ್ಕಿಲ್ಲ. ಇಂಥ ಸನ್ನಿವೇಶದಲ್ಲಿ ನಾಳೆ ವಿಚಾರ ಮಾಡಬೇಕೆಂಬ ಪ್ರಸಂಗ ಒದಗಿದರೆ ಯಾರನ್ನು ವಿಚಾರ ಮಾಡಬೇಕು ? ಈ ವಿಚಾರ ಗೊತ್ತಿರತಕ್ಕದ್ದು ಸತ್ತು ಹೋಗಿರತಕ್ಕ ನರೋನ್ಹರವರಿಗೆ ಮಾತ್ರ.

ಶ್ರೀ ಟಿ. ಎಂ. ಮಂಜುನಾಥ.—ಈ ಬಗ್ಗೆ ಸತ್ತುಹೋಗಿರತಕ್ಕ ನರೋನ್ಹರವರನ್ನು ಮತ್ತು ಬದುಕಿರತಕ್ಕ ಮಂತ್ರಿಗಳನ್ನು ಕೇಳಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಈ ವಿಚಾರ ಛೀಫ್ ಜಸ್ಟೀಸಿಗೆ ಗೊತ್ತಿದೆ.

ಶ್ರೀ ಎಂ ಎಸ್. ಕೃಷ್ಣನ್.—ಮಾನ್ಯ ನರೋನ್ಹರವರು ಸಾಯುವುದಕ್ಕೆ ಮುಂಚೆ ಈಗಿನ ಛೀಫ್ ಜಸ್ಟೀಸಿಗೆ ಬರೆದುಕೊಟ್ಟಿದ್ದಾರೆಯೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅವರು ತಿಳಿಸಿದ್ದರೆಂದು ಹೇಳಿದ್ದಾರೆಯೇ ವಿನಹ ಬರೆದುಕೊಟ್ಟಿದ್ದಾರೆಂದು ಹೇಳಿಲ್ಲ. If an enquiry were to be instituted, the evidence of the Chief Justice cannot be relied upon because, it is only a 'hear-say'. So far as the evidence is concerned Chief Justice and myself are common men.

ಅಧ್ಯಕ್ಷರು.—ತಾವು ಹೇಳಿದ್ದು ತಪ್ಪು, ತಾವು ಹಾಗೆ ಮಾತನಾಡಬಾರದು.

(೪-೫ ಮಂದಿ ಸದಸ್ಯರು ಒಟ್ಟಿಗೆ ನಿಂತು ಮಾತನಾಡಿದರು)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು. ಅದು ಏನು ವಕಾಲತ್ತು, ಏನು ಆರ್ಗ್ಯೂಮೆಂಟು ? ಯಾರ ಮುಂದೆ, ಏತಕ್ಕೋಸ್ಕರ? ನೀವು ದೊಡ್ಡ ಲಾಯರು ಎಂದು ಹೀಗೆ ಮಾತನಾಡಿದರೆ ಜನ ಏನು ಅಂದುಕೊಳ್ಳುತ್ತಾರೆ ? ಈಗ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಯಾರೂ ವಕಾಲತ್ತನ್ನು ವಹಿಸಿಲ್ಲ, ವಹಿಸಬೇಕಾದ ಅವಶ್ಯಕತೆಯೂ ಇಲ್ಲ ನೀವು ಹೇಳಿದ್ದನ್ನು ಕೇಳಿದ್ದೇನೆ, ಅವರು ಹೇಳಿದ್ದನ್ನು ಕೇಳಿದ್ದೇನೆ. ಯಾರ ಪರವಾಗಿಯಾಗಲಿ, ವಿರೋಧವಾಗಿಯಾಗಲಿ ವಕಾಲತ್ತು ಇಲ್ಲ. ಮಾನ್ಯ ಪುಟ್ಟಸ್ವಾಮಿಯಂಥವರು ಇದನ್ನು ಕೈಬಿಡುವ ಹಾಗೆ ಕಾಣುತ್ತದೆ ಎಂದು ಹೇಳಿದರು ಅವರು ಅನುಭವಿಕ ವಕೀಲರು ಆಗಿದ್ದಾರೆ. ವಕೀಲರಾದವರೆಲ್ಲ ಕಾನ್‌ಸ್ಟಿಟ್ಯೂಷನ್‌ನಲ್ಲಿ ಎಕ್ಸ್‌ಪರ್ಟ್ಸ್ ಆಗಿರುತ್ತಾರೆ ಎಂದು ಹೇಳುವುದಕ್ಕೆ ಬರುವುದಿಲ್ಲ. ನಾನು ಲಾ ಓದಿದ್ದಾಕ್ಷಣ ನನಗೆ ಏನೂ ಬರುವುದಿಲ್ಲವೆಂದು ಸಹ ಹೇಳುವುದಕ್ಕೆ ಬರುವುದಿಲ್ಲ. ಅವರ ಮಾತು ಮರ ಕಡಿದು ಮೇಲೆ ಕೆಡವಿಕೊಳ್ಳಬೇಕೆಂಬ ರೀತಿಯಾಗಿದೆ. I am not prepared for that. It is for the gentleman who has made the statement to say what he has said. I have tried to find out whether he is in a position to disclose the names of those persons so that I could take appropriate action. So, Madam, it is not fair to that I am escaping in this matter. I have made abundantly clear that I am prepared to take action at the appropriate time if the names are disclosed. It is not only disclosure, but there must be some evidence to show that such persons have acted in such manner etc., I am sure, the entire House agrees with me. Merely by saying, we can't take action. Have I prevented anybody or the Chief Justice of Karnataka High Court to tell me in secret the names of those culprits. I have not prevented anybody.

Sri K. Puttaswamy.—He has disclosed the names elsewhere.

Sri D. Devaraj Urs.—On that I have not said anything; please go through it. But kindly understand word by word. Without that don't come to conclusion. He may write or he may not write to the Chief Justice of India or the Home Minister. Therefore, on the presumption that the Chief Justice has already written to the Chief Justice of India and the Home Minister, I am sorry, I cannot act on that. If there is anything please let me know. Let me know the truth first whether he has written to the Minister of Law and the Chief Justice of Supreme Court of India. Merely on the sayings I cannot act upon.

Sri K. Puttaswamy.—He has written to the Supreme Court Chief Justice and the Home Minister.

Sri D. Devaraj Urs.—That is not known to me. If you know it, let me know.

Sri K. Puttaswamy.—I know it from the Press.

Sri D. Devaraj Urs.—I cannot act on the Press Statement.

Sri K. Puttaswamy.—You have now acted on the Press Statement.

SRI D. DEVARAJ URS —I have clearly requested so and so...

SRI K. PUTTASWAMY.—That request is based on the Press Statement.

SRI D. DEVARAJ URS.—That is true but the Press Statement given by him and the information I have received is quite contradictory. I cannot take a lesson from you on that. I know the ground on which I am standing and it is false. I am sorry, I cannot write suo-moto unlest I know what it is. To this minute, to my knowledge I doubt whether a letter has gone either to the Union Minister or to the Chief Justice of India. So, I cannot act on pre-nmption.

SRI K. PUTTASWAMY.—In that case, you have to take note on the conduct of the Chief Justice.

SRI D DEVARAJ URS.—That is a separate issue. Don't mix up issues. I connot be hustled into it. At this stage, this is the position. The relevant question was put or cropped up by Hon'ble. Member from Puttur, Mr. Shankar Alva, I thought he understood me when I said unless there is a proof, whoever it is, he must be considered as innocent. I still hold there is no proof enough to say so and so has gone or made such an attempt to insinuate the judge. I continue to think every Minister, individually and the Ministers collectively, are innocent and have not itdulged in any misconduct. This is all I can say.

ಶ್ರೀ ಹೆಚ್. ಡಿ. ದೇವೇಗೌಡ —ಮಾನ್ಯ ಮುಖ್ಯ ಮಂತ್ರಿಗಳು ಈಗ ಏನು ಉತ್ತರ ಕೊಟ್ಟಿದ್ದಾರೆ ಅಷ್ಟರಿಂದಲೇ ಸಮಾಧಾನ ಪಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ ದಯವಿಟ್ಟು ನಮಗೆ ಇರತಕ್ಕ ಅನುಮಾನವನ್ನು ಹೋಗಲಾಡಿಸಬೇಕು. ಇವತ್ತು ಅವರು ತೆಗೆದುಕೊಂಡಿರತಕ್ಕ ನಿಲುವು ಏನಿದೆ ಅದು ಸರಿಯೋ ತಪ್ಪೋ ? ಅದು ತಿಳುವಳಿಕೆ ಆಗಬೇಕು. ಆದ್ದರಿಂದ ಅಟ್ರೊಕೇಟ್ ಜನರಲ್‌ರವರನ್ನು ಈ ಸಭೆಗೆ ಕರೆಸಬೇಕು. ಕೇಂದ್ರದ ಕಾನೂನು ಮಂತ್ರಿಗಳಿಗೆ ಅಡ್ವಿಸ್ಟ್ರೇಟಿವ್ ಕಂಟ್ರೋಲ್ ಇರುವುದರಿಂದ ಅವರು ಇದರ ಬಗ್ಗೆ ಕ್ರಮ ತೆಗೆದುಕೊಂಡಿರಬಹುದು.

SRI H. M. CHANNABASAPPA —The Ccief Justice statement made in the Press does not from part of the Proceedings.

SRI H. D. DEVE GOWDA.—His statement has damaged the image of the Minister of this House. Tomorrow, tom Dick and Harry may say something. Are you going to keep quiet ?

SRI H. M. CHANNABASAPPA.—If it was the intention of the Chief Justice to purify the administration, I will be very happy. He should have immediately written to the Chief Minister.

ಶ್ರೀ ಎಚ್. ಡಿ. ದೇವೇಗೌಡ.—ಹೊರಗಡೆ ಯಾರಾದರೂ ಶಾಸಕರ ಮತ್ತು ಮಂತ್ರಿಗಳ ನಡತೆ ಬಗ್ಗೆ ಪ್ರಶ್ನೆ ಮಾಡಿದರೆ ಅಥವಾ ಇಂಡಿವಿಜ್ಯುಯಲ್ ಕ್ಯಾಪಾಸಿಟಿ ಬಗ್ಗೆ ಟೀಕೆ ಮಾಡಿದರೆ ಅದು ಇಲ್ಲಿ ಬರುವುದಿಲ್ಲ ಎಂದು ತಿಳಿದುಕೊಂಡಿದ್ದೇನೆ. ಆದರೆ ಶಾಸಕರು ಮತ್ತು ಮಂತ್ರಿಗಳು ಅಯೋಗ್ಯರು ಎಂದು ಹೇಳಿದರೆ ಅಷ್ಟು ಸುಲಭವಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿಯೂ ಜನರಲೈಸ್ ಮಾಡಿ ಈ ಸಭೆಯ ಶಾಸಕರು, ಮಂತ್ರಿಗಳು ಅಯೋಗ್ಯರು ಎಂದರೆ ಸುಮ್ಮನೆ ಕುಳಿತುಕೊಳ್ಳುವುದಕ್ಕೆ

ಆಗುತ್ತದೆಯೇ ? ಈ ಸಭೆಯ ಸದಸ್ಯರ ಚಾರಿತ್ರ್ಯದ ಬಗ್ಗೆ ಮಾತನಾಡುವುದು ಅಷ್ಟು ಸುಲಭವಲ್ಲ. ಅವರು ಚೀಫ್ ಜಸ್ಟೀಸ್ ಇರಬಹುದು ಯಾರೇ ಇರಬಹುದು ಎಂತಹ ದೊಡ್ಡ ವ್ಯಕ್ತಿಯೇ ಇರಬಹುದು ಈ ಸಭೆಯ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಈ ಸಭೆಗೆ ಅಡ್ವೊಕೇಟ್ ಜನರಲ್ ರವರನ್ನು ಕರೆಸಿ ನಮಗೆ ಇರತಕ್ಕ ಅನುಮಾನವನ್ನು ಹೋಗಲಾಡಿಸಿ. ಅದರಲ್ಲಿಯೂ ಕರ್ನಾಟಕ ಶಾಸಕರ ಮೇಲೆ ಗುರುತರವಾದ ಅಪಾದನೆ ಮಾಡಿರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ We cannot tolerate that; We cannot reduce to that level. Whether the stand taken by the Chief Justice insofar as disclosing the names are concerned is within his limit or not should be clarified by the Advocate General and he must be summoned He is a Member of this House I am not a legal expert. May be the Chief Minister has got better experience because he is in the public service since 30-35 years. May be Mr. Puttaswamy has got better experience. But, what I want to say is, the Advocate General must be summoned. We have got every right to summon him.

SRI H SIDDAVEERAPPA.—It is not a legal issue, What for we are calling the Advocate General ?

SRI H. D. DEVE GOWDA.—To know whether the stand taken by the Chief Justice is correct or not. We want to know the relevancy of it.

SRI H. SIDDAVEERAPPA.—He can come only to say his views on legal matters.

SRI H. D. DEVE GOWDA.—The Hon'ble Speaker has got every right to summon.

SRI H. SIDDAVEERAPPA.—Of course, she can.

SRI H. D. DEVE GOWDA.—We don't doubt the bonafides of the Chief Minister.

ಶ್ರೀ ಡಿ. ದೇವರಾಜ ಅರಸ್ —ಮಾನ್ಯ ಅಧ್ಯಕ್ಷರೇ ಮತ್ತೆ ನಾನು ಇನ್ನೊಂದು ಸಾರಿ ಹೆಚ್ಚು ಹೇಳಬೇಕಾಗಿಲ್ಲ. ಒಂದು ಮಾತನ್ನು ಈ ಸಭೆಗೆ ಸ್ಪಷ್ಟಪಡಿಸಬೇಕಾಗಿದೆ. ಸರ್ಕಾರ ಅಂದರೆ ನಾನು ಈ ವಿಚಾರವನ್ನು ಸೀರಿಯಸ್ ಆಗಿ ತೆಗೆದುಕೊಂಡಿಲ್ಲ ಎಂದು ತಾವು ಹೇಳಲಾರಿರಿ ಎಂದು ನಾನು ಭಾವಿಸುತ್ತೇನೆ ನನಗೆ ಇನ್‌ಫರ್ಮೇಷನ್ ಬಂದಾಗ ನಾನು ದೆಹಲಿಯಲ್ಲಿದ್ದರೂ ಸಹ ಚೀಫ್ ಸೆಕ್ರಟರಿಯವರಿಗೆ ಈ ವಿಚಾರವನ್ನು ತಿಳಿಸಿ ಕೂಡಲೇ ಚೀಫ್ ಜಸ್ಟೀಸ್‌ರವರನ್ನು ಕಂಡು ಗುಪ್ತವಾಗಿ ಯಾರು ಎಂಬುದನ್ನು ತಿಳಿದುಕೊಂಡು ಬನ್ನಿ ಎಂದು ಹೇಳಿದಾಗ ಅವರು ಹೋಗಿ ಕಂಡುಬಂದಿದ್ದಾರೆ I did not even waste half-a-day. What I did first was, as I came to Bangalore, to write a letter to the Chief Justice. ನಿನ್ನೆ ತಾರೀಖು ಕೊಟ್ಟಿದ್ದಾರೆ, ನಾನು ಇರಲಿಲ್ಲ, ಇವತ್ತು ತಮಗೆ ಹೇಳುತ್ತೇನೆ ಎಂದು ಹೇಳಿದ್ದೆ. ನಿನ್ನೆ ನಾನು ಬರಲಿಕ್ಕೆ ಆಗಲಿಲ್ಲ I took the earliest opportunity to disclose whatever action I have taken to this Hon'ble House. ಆದ್ದರಿಂದ ಸರ್ಕಾರದ ಉದ್ದೇಶ ಈ ವಿಚಾರವನ್ನು ಅಡಗಿಸಿಬಿಡಬೇಕು, ಮುಚ್ಚಿಹಾಕಬೇಕು ಎನ್ನುವ ಭಾವನೆ ಮಾತ್ರ ಖಂಡಿತ ನನಗೆ ಇಲ್ಲವೆಂದು ನಿವೇದಿಸಿಕೊಳ್ಳುತ್ತೇನೆ. As Chief Minister and also as Leader of this House, I have certain responsibilities and certain conventions through which I have to pass. I cannot do as I like. ಯಾರು ಏನು ಮಾಡಿದರೂ ನಾನು ಹಾಗೆ ಮಾಡುವುದಕ್ಕೆ ಬರುವುದಿಲ್ಲ. ನಾವು ಬಹಿರಂಗವಾಗಿ ನ್ಯಾಯಾಧೀಶ ಬಗ್ಗೆ ಮಾತನಾಡುವುದಿಲ್ಲ, ಅವರು ಮಾತನಾಡುತ್ತಾರೆ ನಾವು ಏನು

ಮಾಡುವುದು? They are above board and they are coming from heaven. ಶ್ರೀಮಾನ್ ದೇವೇಗೌಡರಿಗೆ ಇರತಕ್ಕ ಆತಂಕ ನನಗೆ ಅರ್ಥವಾಗಿದೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಈ ವಿಚಾರವನ್ನು ವಾಯಿದೆಗೆ ಬಿಟ್ಟರು ಎಂದು ತಾವು ಭಾವಿಸಬೇಡಿ. ಅದು ಇನ್ನೆಂದು ಹಂತದಲ್ಲಿ ಈ ರೀತಿ ಆದರೆ ನಾನು ತಾನೆ ಏನು ಮಾಡುವುದಕ್ಕೆ ಆಗುತ್ತದೆ? ಇವತ್ತಿನ ಮಟ್ಟಿಗೆ ನನಗೆ ತಿಳಿದಂತಹ ವಿಚಾರಗಳೆಲ್ಲವನ್ನೂ ಇಟ್ಟಿದೇನೆ. ಸರ್ಕಾರದ ಮೋಟಿವ್ಸ್ ಕೂಡ ಬಹಿರಂಗಪಡಿಸಿದ್ದೇನೆ. ಯಾವುದನ್ನೂ ಮುಚ್ಚಿಡುವುದಿಲ್ಲವೆಂದು ಸ್ಪಷ್ಟಪಡಿಸಿದ್ದೇನೆ. ಮಾನ್ಯ ದೇವೇಗೌಡರು ನಮ್ಮ ಬೆನ್ನು ತಟ್ಟುತ್ತಾರೆಂದು ನಂಬಿಕೊಂಡಿದ್ದೇನೆ ಈ ಹಂತದಲ್ಲಿ ನಾನು ಏನು ಮಾಡಬೇಕಾಗುತ್ತದೆ? ಅವರೇ ನಾಳೆ ಬರೆಯಬಹುದು, ನನಗೆ ಗೊತ್ತಿಲ್ಲ.

Whether he writes or does not write—I don't have knowledge at the moment. ತಾವು ಹೇಳಿದ ಹಾಗೆ ಲೀಗಲ್ ಆಸ್ಪೆಕ್ಟ್ ಬಂದಂತಹ ಸಂದರ್ಭದಲ್ಲಿ ಅಡ್ವೋಕೇಟ್ ಜನರಲ್‌ರವನ್ನು ಕರೆಸೋಣ. I will also talk to others.

Regarding the question of privilege, I would also request the Hon'ble Speaker to think about it, consult proper authorities and then give her ruling if it is necessary.

SRI H. D. DEVE GOWDA—I will abide by the Hon'ble Speaker's ruling.

BUDGET ESTIMATES FOR 1977-78
General Discussion

(Debate Continued)

ಶ್ರೀ ಕೆ. ಎನ್ ವೀರಭದ್ರಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ೧೯೭೭-೭೮ನೇ ಸಾಲಿನ ಬಡ್ಜೆಟ್ಟನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತಾ, ಕೆಲವು ವಿಷಯಗಳನ್ನು ಮಾತ್ರ ಈಗ ಪ್ರಸ್ತಾಪ ಮಾಡಬೇಕಾಗಿದೆ. ಮೊದಲನೆಯದಾಗಿ ಈ ಕ್ಷಾಮ ಪರಿಹಾರದ ಬಗ್ಗೆ ಸಾಕಷ್ಟು ಹಣವನ್ನು ಪ್ರತಿ ವರ್ಷವೂ ಕೂಡ ಖರ್ಚು ಮಾಡುವಂತಾದ್ದನ್ನು ನಾವು ನೋಡುತ್ತಿದ್ದೇವೆ. ಈ ರೀತಿ ಖರ್ಚು ಮಾಡುವಂತಹ ಹಣದಲ್ಲಿ ಹೆಚ್ಚು ಭಾಗ ಹಣವನ್ನು ಮಣ್ಣಿನ ಕೆಲಸಕಾರ್ಯಗಳಿಗೆ ಖರ್ಚು ಮಾಡತಕ್ಕದ್ದನ್ನು ನಾವು ನೋಡಿದ್ದೇವೆ. ಜನಗಳಿಗೆ ಕೂಲಿ ಕೊಡಬೇಕೆಂಬ ಎನ್ನುವ ಒಂದೇ ಉದ್ದೇಶದಿಂದ ಕೆರೆಗಳಲ್ಲಿ ನೀರು ನಿಲ್ಲುತ್ತದೆಯೋ, ನಿಲ್ಲುವುದಿಲ್ಲವೋ, ಅಥವಾ ಬಾವಿಗಳಲ್ಲಿ ನೀರು ಬರುತ್ತದೆಯೋ, ಬರುವುದಿಲ್ಲವೋ ಎನ್ನುವ ಯೋಚನೆ ಇಲ್ಲದೇ ಈ ಕೆಲಸಗಳನ್ನು ಮಾಡಿ ಹಣವನ್ನು ಈ ಕೆಲಸಗಳಿಗೆ ವಿನಿಯೋಗಿಸುತ್ತಿದ್ದಾರೆ. ನಾನು ನಮ್ಮ ಜಿಲ್ಲೆಯಲ್ಲಿ ವಿಪರೀತ ವಾಗಿರುವ ಕ್ಷಾಮ ಪ್ರದೇಶಗಳಿಗೆ ಪ್ರವಾಸ ಮಾಡಿದಾಗ ಸಿಂಗಟಗೆರೆ, ಹಳ್ಳಕ್ಕೆ ಲಿಫ್ಟ್ ಇರಿಗೇಷನ್ ಸ್ಕೀಮ್ ಮಾಡಿದರೆ ಅಲ್ಲಿಯ ಜನತೆಗೆ ಒಳ್ಳೆ ಅನುಕೂಲವಾಗುತ್ತದೆ ಎನ್ನುವುದು ತಿಳಿದು ಬಂತು ಕಾರಣ ಅಂದರೆ ಆ ಒಂದು ಹಳ್ಳಿಯ ಪಕ್ಕದಲ್ಲಿ ಒಂದು ಹಳ್ಳ ಹರಿಯುತ್ತದೆ. ಆದುದರಿಂದ ಈ ಆಧುನಿಕ ಯುಗದಲ್ಲಿ ಸಾಕಷ್ಟು ಲಿಫ್ಟ್ ಇರಿಗೇಷನ್ ಸ್ಕೀಮುಗಳನ್ನು ಹಾಕಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ಭಾರಿ ಭಾರಿ ಆಕ್ಷಕಟ್ಟನ್ನು ಕಟ್ಟಲಿಕ್ಕೆ ಸ್ಕೀಮ್ ಹಾಕಿ, ಕ್ಷಾಮ ಪ್ರದೇಶಗಳಿಗೆ ನೀರನ್ನು ಹರಿಸತಕ್ಕ ಯೋಜನೆ ಮಾಡಲಿಕ್ಕೆ ಪ್ರಯತ್ನ ಪಡಂತಾರೆ. ಆದರೆ ಕೆಲವು ಪ್ರದೇಶಕ್ಕೆ ನೀರನ್ನು ಒದಗಿಸತಕ್ಕ ಸಂದರ್ಭದಲ್ಲಿ ಅನೇಕ ಪ್ರದೇಶಗಳು ಮುಳುಗಿ ಹೋಗತಕ್ಕದ್ದನ್ನು ನಾವು ನೋಡಿದ್ದೇವೆ. ಅಂತಹ ಸಂದರ್ಭದಲ್ಲಿ ಆಯಾಯ ಪ್ರದೇಶದವರು ಈ ಭಾರಿ ಆಕ್ಷಕಟ್ಟನ್ನು ಹಾಕಬಾರದು ಎಂದು ಹೇಳಿ ಪ್ರಸ್ತಾಪಮಾಡಿದ್ದನ್ನು ಕೂಡ ಕೇಳಿದ್ದೇವೆ. ಅಂದಮೇಲೆ ಈ ಒಂದು ಲಿಫ್ಟ್ ಇರಿಗೇಷನ್ ಸ್ಕೀಮ್ ಏನು ಇವೆ ಇದನ್ನು ದೊಡ್ಡ ದೊಡ್ಡ ಮಟ್ಟದಲ್ಲಿ, ದೂರದಲ್ಲಿ ಹರಿಯತಕ್ಕ ಹೊಳೆಗಳಿಗೆ ಹಾಕಿ ಅದನ್ನು ಇಲೆಗೆ ಕನೆಕ್ಷನ್ ಕೊಟ್ಟು ನೀರಾವರಿ ಮಾಡತಕ್ಕ ಅವಕಾಶ ನಮ್ಮ ದೇಶದಲ್ಲಿ ಸಾಕಷ್ಟು ಕಡೆಗಳಲ್ಲಿ ಇದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ.